# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

## ೯೦ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2024ನೇ ಸಾಲಿನ ೮ನೇ ಸಭೆಯ ನಡಾವಳಿಗಳು

ದಿನಾಂಕ : ಮಂಗಳವಾರ, 31-12-2024

ಸಮಯ : ಮಧ್ಯಾಹ್ನ 12:30 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ, ರಾಚವಿ, ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **90ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2024ನೇ ಸಾಲಿನ 8ನೇ ಸಭೆಯನ್ನು** ದಿನಾಂಕ 31 ಡಿಸೆಂಬರ್ 2024 ರಂದು ಮಧ್ಯಾಹ್ನ 12.30 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಸಿ. ಎಂ. ತ್ಯಾಗರಾಜ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಪ್ರೊ. ಎಸ್. ಬಿ. ಆಕಾಶ | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. | ಡಾ. ಎಸ್. ಬಿ. ಉಕ್ಕಲಿ | ಸದಸ್ಯರು |
| 6. | ಡಾ. ಶಾರದಾಮಣಿ ಎಸ್ ಹುಣಶಾಳ | ಸದಸ್ಯರು |
| 7. | ಡಾ. ಕಾವೇರಿ ಎಚ್.ಎಂ. | ಸದಸ್ಯರು |
| 8. | ಶ್ರೀ. ರಫೀ ಭಂಡಾರಿ | ಸದಸ್ಯರು |
| 9. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 10. | ಶ್ರೀ. ಮಹಾಂತೇಶ ಕಂಬಾರ | ಸದಸ್ಯರು |
| 11. | ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 12. | ಶ್ರೀಮತಿ ಎಂ.ಎ. ಸಪ್ಪ, ಕೆ.ಎ.ಎ.ಎಸ್.(ಹಣಕಾಸು ಅಧಿಕಾರಿಗಳು) | ವಿಶೇಷ ಆಹ್ವಾನಿತರು |
| 13. | ಶ್ರೀ ರವೀಂದ್ರನಾಥ ಕದಮ್, (ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 14. | ಶ್ರೀ. ಸಂತೋಷ ಕಾಮಗೌಡ (ಕೆ.ಎ.ಎಸ್.(ಹಿರಿಯ ಶ್ರೇಣಿ)) | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 6. | ಪ್ರೊ. ಸಿದ್ಧಗೌಡ ಪಾಟೀಲ್ | ಸದಸ್ಯರು |
| 7. | ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156**

**ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು**

**ವಿಷಯ:** ದಿನಾಂಕ 31 ಡಿಸೆಂಬರ್ 2024 ರಂದು ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ವಿಶ್ವವಿದ್ಯಾಲಯದ 90ನೇ ಹಾಗೂ 2024ನೇ ಸಾಲಿನ 8ನೇ ಸಾಮಾನ್ಯ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 16.12.2024.

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 16.12.2024.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 90ನೇ ಹಾಗೂ 2024 ನೇ ಸಾಲಿನ 8 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 31.12.2024 ರಂದು ಮಧ್ಯಾಹ್ನ 12.30 ಗಂಟೆಗೆ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು. ಸಭೆಯಲ್ಲಿ ಹಾಜರಾದ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿದರು. ನಂತರ, 2025 ನೇ ವರ್ಷದ ವಿಶ್ವವಿದ್ಯಾಲಯದ ಕ್ಯಾಲೆಂಡರ್, ಟೇಬಲ್ ಕ್ಯಾಲೆಂಡರ್ ಮತ್ತು ಡೈರಿಗಳನ್ನು ಅನಾವರಣಗೊಳಿಸುವುದರ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ರಾಜ್ಯ ಹಾಗೂ ದೇಶದ ಸಮಗ್ರ ಅಭಿವೃದ್ಧಿಗೆ ಅಪಾರ ಕೊಡುಗೆಗಳನ್ನು ನೀಡಿರುವ ಮಾಜಿ ಪ್ರಧಾನಿ ದಿವಂಗತ ಸನ್ಮಾನ್ಯ ಶ್ರೀ ಮನಮೋಹನ ಸಿಂಗ್ ಮತ್ತು ಮಾಜಿ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣ ಇವರುಗಳು ನಿಧನ ಹೊಂದಿದ್ದು ದೇಶಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಖ್ಯಾತ ಅರ್ಥಶಾಸ್ತ್ರಜ್ಞರಾಗಿದ್ದ ಮಾಜಿ ಪ್ರಧಾನಿ ದಿವಂಗತ ಸನ್ಮಾನ್ಯ ಶ್ರೀ ಮನಮೋಹನ ಸಿಂಗ್ ಇವರು 1990 ರಲ್ಲಿ ದೇಶವನ್ನು ಆರ್ಥಿಕ ಪ್ರಪಾತದಿಂದ ರಕ್ಷಿಸಿರುವುದನ್ನು ಮತ್ತು ಮಾಜಿ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣ ಇವರು ರಾಜ್ಯ ಮತ್ತು ದೇಶದ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ಕರ್ನಾಟಕದ ಕೀರ್ತಿಯನ್ನು ಎತ್ತರಕ್ಕೆ ತೆಗೆದುಕೊಂಡು ಹೋಗಿರುವುದನ್ನು ಸ್ಮರಿಸಿ ಇಬ್ಬರು ದಿಗ್ಗಜ್ಜರ ನಿಧನ ಪ್ರಯುಕ್ತ ಎರಡು ನಿಮಿಷ ಮೌನಾಚಾರಣೆ ನಡೆಸುವುದರ ಮೂಲಕ ಗೌರವ ಸಲ್ಲಿಸಲು ಕರೆ ನೀಡಿದರು.

ತದನಂತರ ವಿಷಯಸೂಚಿಗಳನ್ನು ಪ್ರಸ್ತಾಪಿಸಲಾಯಿತು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 90 ನೇ ಹಾಗೂ 2024 ನೇ ಸಾಲಿನ 8 ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 31–12–2024 ರಂದು ಕೈಗೊಂಡ ತೀರ್ಮಾನಗಳು.**

| | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2024/12/01 | ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| | ತೀರ್ಮಾನ | **ದಿನಾಂಕ 02.12.2024 ರಂದು ನಡೆದ ವಿಶೇಷ ಸಭೆ ಹಾಗೂ 06.12.2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡಲಾಯಿತು.**<br>**ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಕಂಪೌಂಡ ಗೋಡೆ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಸಮಯಾವಕಾಶ ಬೇಕಾಗುತ್ತದೆ ಎಂದು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಜನವರಿ–2025 ರಲ್ಲಿ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿ ಫೆಬ್ರುವರಿ–2025 ರಲ್ಲಿ ಮುಕ್ತಾಯವಾಗುತ್ತದೆ. ಕಾರಣ, ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲಾಗುವುದು ಎಂದರು.** |

<table>
<tr><td></td><td></td><td>ದಿನಾಂಕ 02.12.2024 ರಂದು ನಡೆದ ವಿಶೇಷ ಸಭೆ ಹಾಗೂ 06.12.2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು.</td></tr>
<tr><td></td><td>2024/12/01<br>/ಅ</td><td>ಶ್ರೀ. ಮಹಾಂತೇಶ ಕಂಬಾರ ಇವರು ಪ್ರಸ್ತಾಪಿಸಿರುವ ವಿಷಯಗಳು:-<br>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ತಾವು ಮತ್ತು ಸದಸ್ಯರಾದ ಡಾ. ಕಾವೇರಿ.ಎಚ್.ಎಂ. ದಿನಾಂಕ: 30.12.2024 ರಂದು ಭೇಟಿ ನೀಡಿದ್ದೇವು. ಆ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರು ಕಛೇರಿ ಸಮಯದಲ್ಲಿ(4.15) ಇರದೇ ಇರುವುದು ಕಂಡು ಬಂದಿರುತ್ತದೆ ಹಾಗೂ ಮಹಾವಿದ್ಯಾಲಯದ ಕಟ್ಟಡ ಪರಿವೀಕ್ಷಣೆ ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದಾಗ ಈ ಕೆಳಕಾಣಿಸಿದ ಸಮಸ್ಯೆಗಳನ್ನು ಗಮನಿಸಿರುವುದಾಗಿ ತಿಳಿಸಿದರು.<br><br>1. ಕುಡಿಯಲು ನೀರಿನ ಸಮಸ್ಯೆ(ಫಿಲ್ಟರ ನೀರು), ಶುಚಿತ್ವವಾದ ಶೌಚಾಲಯ ಇಲ್ಲದೇ ಇರುವುದು(ವಿಶೇಷವಾಗಿ ವಿದ್ಯಾರ್ಥಿನಿಯರ ಶೌಚಾಲಯ). ಕಾರಣ ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ಸ್ವಚ್ಚತೆಯನ್ನು ಕಾಪಾಡಲು, ಮೂಲಸೌಕರ್ಯಗಳನ್ನು ಒದಗಿಸುವುವಲ್ಲಿ ಸೂಕ್ತ ಕ್ರಮವಹಿಸುವುದು.<br>2. ಹೆಚ್ಚಿನ ಸಂಖ್ಯೆಯ ಶೌಚಾಲಯಗಳು ಸಿಬ್ಬಂದಿಗಳಿಗೆ ಮಾತ್ರ ಮೀಸಲಿರಿಸಲಾಗಿದೆ. 3000 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಮಹಾವಿದ್ಯಾಲಯದಲ್ಲಿ ಅಧ್ಯಯನ ನಡೆಸುತ್ತಿದ್ದು ವಿದ್ಯಾರ್ಥಿಗಳಿಗೆ ಸೂಕ್ತವಾದ ಸ್ಥಳಗಳಲ್ಲಿ ಶೌಚಾಲಯಗಳ ವ್ಯವಸ್ಥೆ ಕಲ್ಪಿಸುವುದು ಹಾಗೂ ಘಟಕ ಮಹಾವಿದ್ಯಾಲಯದ ಎರಡನೇ ಮಹಡಿಯಲ್ಲಿನ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವುದು.<br>3. Women's Grieveance Committee, SC/ST Cell ಗಳ Board ಗಳು ಹೆಸರಿಗೆ ಮಾತ್ರ ಅಳವಡಿಸಿದ್ದು, ಸದರಿ ಸಮಿತಿಗಳು ಮಹಾವಿದ್ಯಾಲಯದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಭಾಗವಹಿಸುಂತೆ ಕ್ರಮ ಜರುಗಿಸುವುದು.<br>ಸಮಸ್ಯೆಗಳ ಕುರಿತಾಗಿ ಪ್ರಾಚಾರ್ಯರಿಗೆ ವಿಚಾರಿಸಿದಾಗ ಈ ವಿಷಯಗಳು ತಮ್ಮ ಗಮನಕ್ಕೆ/ಮಾಹಿತಿ ಬಂದಿರುವುದಿಲ್ಲ ಎಂದಿರುತ್ತಾರೆ ಎಂದು ತಿಳಿಸಿ ಪ್ರಾಚಾರ್ಯರ ಕಾರ್ಯವೈಖರಿ ಮತ್ತು ಅವರಿಗೆ ನಿಗದಿಪಡಿಸಿದ ವೇತನದ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿದರು. ದನಿಗೂಡಿಸಿದ ಸದಸ್ಯರಾದ ಡಾ. ಮಾರುತಿ ಮುಂಡರಗಿ ಇವರು ತಾವು ಈ ಹಿಂದೆ ಮಹಿಳಾ ಮಹಾವಿದ್ಯಾಲಯದಲ್ಲಿ ಸುಮಾರು 30 ವರ್ಷ ಸೇವೆ ಸಲ್ಲಿಸಿದ್ದು, ಈ ಅವಧಿಯಲ್ಲಿ ತಮ್ಮ ಮಹಾವಿದ್ಯಾಲಯಕ್ಕೆ ಎರಡು ಬಾರಿ ನ್ಯಾಕ್ ಭೇಟಿ ಕೈಗೊಂಡಿತ್ತು. ಭೇಟಿ ನೀಡಿದ ಸಂದರ್ಭದಲ್ಲಿ ಮುಖ್ಯವಾಗಿ ನ್ಯಾಕ್ ಕಮಿಟಿ ಶೌಚಾಲಯಗಳ ಸ್ವಚ್ಚತೆಗೆ ಹೆಚ್ಚಿನ ಆದ್ಯತೆ ನೀಡಿರುತ್ತಾರೆ. ಕಾರಣ, ಮೂಲಸೌಕರ್ಯಗಳನ್ನು ಮಹಾವಿದ್ಯಾಲಯದಲ್ಲಿ ಒದಗಿಸುವುದು ತುಂಬಾ ಅವಶ್ಯವಾಗಿರುತ್ತದೆ ಎಂದರು.<br>ಮುಂದುವರೆದು, ಕುಲಸಚಿವರು ದಿನಾಂಕ: 22.11.2024 ರಂದು ಸಂಗೊಳ್ಳಿ ರಾಯಣ್ಣ ಮಹಾವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗಕ್ಕೆ ಓರ್ವ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿ ಆದೇಶಿಸಿರುತ್ತಾರೆ, ಆದರೆ ಪ್ರಾಚಾರ್ಯರು ಸದರಿ ಉಪನ್ಯಾಸಕರನ್ನು ಸೇವೆಗೆ ಹಾಜರುಪಡಿಸಿಕೊಂಡಿರುವುದಿಲ್ಲ ಮತ್ತು ವಿಭಾಗದಲ್ಲಿ ಕಾರ್ಯಭಾರ(Workload/) ಇರುವುದಿಲ್ಲ, Fake workload ಎಂಬ ಪದಗಳನ್ನು ಉಪಯೋಗಿಸಿರುತ್ತಾರೆ. ವಿಶ್ವವಿದ್ಯಾಲಯವು ಕಾರ್ಯಭಾರವನ್ನು ಪರಿಶೀಲಿಸಿಯೇ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿರುತ್ತದೆ. ಕಾರಣ, ಕುಲಸಚಿವರು ಹೊರಡಿಸಿರುವ ಆದೇಶವನ್ನು ಅನುಸರಿಸುವುದನ್ನು ಪ್ರಾಚಾರ್ಯರು ಉಲ್ಲಂಘಿಸಿರುವುದರಿಂದ ಸದರಿಯವರಿಂದ ಸ್ಪಷ್ಟೀಕರಣ ಪಡೆಯಲು ತಿಳಿಸಿದರು ಹಾಗೂ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಮೂರು ವರ್ಷಕ್ಕಿಂತ ಹೆಚ್ಚಿನ ಅನುಭವ ಹೊಂದಿದ ಸಿಬ್ಬಂದಿಗಳಿಗೆ ಆದ್ಯತೆ ನೀಡಲು ಕೋರಿದರು.<br>ಪ್ರತಿಕ್ರಿಯಿಸಿದ ಕುಲಸಚಿವರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಚಾರ್ಯರು ಆಗಸ್ಟ್-2024 ರಲ್ಲಿ ಸೇವೆಗೆ ಸೇರಿರುತ್ತಾರೆ, ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯು ಜೂನ-2024 ರಿಂದ ಪ್ರಾರಂಭಿಸಲಾಗಿದೆ. ಆ ಸಮಯದ ಪ್ರಾಚಾರ್ಯರಾದ ಡಾ. ಶಂಕರ ತೇರದಾಳ ಇವರು ಕಾರ್ಯಭಾರ ವರದಿಯನ್ನು ನೀಡಿದನ್ವಯ ನೇಮಕಾತಿ ಕೈಗೊಳ್ಳಲಾಗಿದೆ. 21, ಅಕ್ಟೋಬರ್-2024 ರಂದು ಪ್ರಸ್ತುತ</td></tr>
</table>

ಪ್ರಾಚಾರ್ಯರಾದ ಪ್ರೊ. ಎಂ. ಜಿ. ಹೆಗಡೆ ಇವರು ಕಾರಣಾಂತರಳಿಂದ ಕೆಲವು ಅತಿಥಿ ಉಪನ್ಯಾಸಕರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಮತ್ತು ಕೆಲವರು ಬಿಟ್ಟು ಹೋಗಿರುತ್ತಾರೆ ಕಾರಣ, ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಲು ವಿನಂತಿಸಿದ ಮೇರೆಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ. ಪ್ರಾಚಾರ್ಯರರ ಮನವಿ ಮತ್ತು ಆದೇಶ ದಿನಾಂಕಗಳ ನಡುವಿನ ಸಮಯದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತೊಮ್ಮೆ ಕಾರ್ಯಭಾರವನ್ನು ಮರುಪರಿಶೀಲಿಸಿ ಕಾರ್ಯಭಾರ ಕಡಿಮೆ ಇರುವುದರಿಂದ ಅತಿಥಿ ಉಪನ್ಯಾಸಕರ ಅವಶ್ಯಕತೆ ಇಲ್ಲವಾದ ಕಾರಣ ಆದೇಶ ಹೊರಡಿಸಿದ ಅತಿಥಿ ಉಪನ್ಯಾಸಕರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಂಡಿರುವುದಿಲ್ಲ. ಕಾರಣ, ಈ ಕುರಿತಾಗಿ ಈಗಾಗಲೇ ಪ್ರಾಚಾರ್ಯರಿಗೆ ಸ್ಪಷ್ಟಿಕರಣ ನೀಡಲು ಸೂಚಿಸಲಾಗಿದೆ ಹಾಗೂ ಪ್ರಾಚಾರ್ಯರಿಗೆ ವೇತನವನ್ನು ಕೆ.ಸಿ.ಎಸ್.ಆರ್ ನಿಯಮಾವಳಿಗಳನ್ವಯ ನಿಗದಿಪಡಿಸಲಾಗಿದೆ ಎಂದರು.

ಕುಲಪತಿಗಳು ಮಾತನಾಡಿ, ಸೆಮಿಸ್ಟರ್ ಅವಧಿ ಮುಕ್ತಾಯವಾಗಲಿದ್ದು ವಿಶ್ವವಿದ್ಯಾಲಯದ ಆರ್ಥಿಕ ಹಿತದೃಷ್ಠಿಯಿಂದ ಮುಂದಿನ ಸೆಮೆಸ್ಟರ್‌ಗೆ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಬಹುದಾಗಿದೆ ಎಂದರು ಹಾಗೂ ಪ್ರೊ. ಎಂ. ಜಿ. ಹೆಗಡೆ ಇವರು ಈ ಹಿಂದೆ ರಾಜ್ಯದ Text Book Committee ಮತ್ತು ಹಲವಾರು ವಿಶ್ವವಿದ್ಯಾಲಯಗಳ ನ್ಯಾಕ್ ಕಮಿಟಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಸದರಿಯವರು ಶ್ರೇಷ್ಠ ಶೈಕ್ಷಣಿಕ ತಜ್ಞರಾಗಿದ್ದು ಆಡಳಿತದಲ್ಲಿ ಅಷ್ಟಾಗಿ ಅನುಭವ ಇರುವುದಿಲ್ಲ. ಮೂಲಸೌಕರ್ಯದ ಕುರಿತಾಗಿ ಗಮನಹರಿಸುವುದು ಮಹಾವಿದ್ಯಾಲಯದಲ್ಲಿ ಸಹಾಯಕ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ಮರತೂರ ಇವರ ಜವಾಬ್ದಾರಿಯಾಗಿರುತ್ತದೆ ಎಂದರು. ಬೋಧಕ ಸಿಬ್ಬಂದಿಗಳು ಕಾಲ-ಕಾಲಕ್ಕೆ ತರಗತಿಗಳನ್ನು ತೆಗೆದುಕೊಳ್ಳುವುದು, ವಿದ್ಯಾರ್ಥಿಗಳು ಹಾಜರಾತಿ, ಆಂತರಿಕ ಅಂಕಗಳನ್ನು ನೀಡುವಲ್ಲಿ ಹಲವಾರು ಕಠಿಣ ಕ್ರಮಗಳನ್ನು ತೆಗೆದುಕೊಂಡು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಪ್ರಾಚಾರ್ಯರು ಮಹತ್ವದ ಪಾತ್ರವಹಿಸಿರುತ್ತಾರೆ ಎಂದರು.

ಶ್ರೀ ರಫೀ ಭಂಡಾರಿ ಇವರು ವಿಶ್ವವಿದ್ಯಾಲಯದ ಅರ್ಹ ಪ್ರಾಧ್ಯಾಪಕರನ್ನು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ನಿಯೋಜಿಸುವುದು ಸೂಕ್ತ. ಈ ಕುರಿತಾಗಿ ಹಿಂದಿನ ಸಭೆಯನ್ನು ಚರ್ಚಿಸಲಾಗಿದೆ ಎಂದರು ಹಾಗೂ ಮಹಾವಿದ್ಯಾಲಯಗಳಲ್ಲಿ ಸಮಸ್ಯೆಗಳನ್ನು ಪರಿಹಾರಿಸಲು ಸಿಂಡಿಕೇಟ್ ಸದಸ್ಯರುಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲು ಸಲಹೆ ನೀಡಿದರು.

ಶ್ರೀ ವಿನೀತ್ ಜೋಶಿ ಇವರು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಪ್ರಾಚಾರ್ಯರ ಕಾರ್ಯವೈಖರಿ ಕುರಿತು ಅಲ್ಲಿನ ಸಿಬ್ಬಂದಿಗಳು ಆಕ್ಷೇಪಣೆ ವ್ಯಕ್ತಪಡಿಸಿರುವ ಮಾಹಿತಿಯನ್ನು ಸಭೆಗೆ ನೀಡಿದರು.

ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಕುರಿತು ಸುದೀರ್ಘವಾಗಿ ಚರ್ಚಿಸಿದ ಸಭೆಯು ವಾಸ್ತವತೆ(Ground Reality) ಪರಿಶೀಲಿಸಲು ಈ ಕೆಳಕಾಣಿಸಿದಂತೆ ಉಪ ಸಮಿತಿ ರಚಿಸಲು ತೀರ್ಮಾನಿಸಿತು. ಸದರಿ ಉಪಸಮಿತಿಯು ಮೂಲ ಸೌಕರ್ಯ, ಪ್ರಾಚಾರ್ಯರು ಮತ್ತು ಅತಿಥಿ ಉಪನ್ಯಾಸಕರ ಕಾರ್ಯವೈಖರಿ ಕುರಿತಾಗಿ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಸೂಚಿಸಿತು.

| ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಮಹಾಂತೇಶ ಕಂಬಾರ | ಅಧ್ಯಕ್ಷರು |
| 2 | ಡಾ. ಎಸ್. ಎಸ್. ಅಂಗಡಿ | ಸದಸ್ಯರು |
| 3 | ಡಾ. ಕಾವೇರಿ. ಎಚ್. ಎಂ. | ಸದಸ್ಯರು |
| 4 | ಶ್ರೀ ವಿನೀತ್ ವ ಜೋಶಿ | ಸದಸ್ಯರು |
| 5 | ಡಾ. ಎಸ್. ಬಿ. ಉಕ್ಕಲಿ | ಸದಸ್ಯ ಕಾರ್ಯದರ್ಶಿ |

| | | |
|---|---|---|
| 02 | 2024/12/02/ಅ | 2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆಗಳಿಗೆ ಸಂಬಂಧಿಸಿ ಮಹಾವಿದ್ಯಾಲಯಗಳ ಮಾಹಿತಿ, ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳು, ಸಮಿತಿ ಅಧ್ಯಕ್ಷರಿಗೆ, ಸದಸ್ಯರಿಗೆ ಮತ್ತು ಲಿಪಿಕ ಸಿಬ್ಬಂದಿಗಳಿಗೆ ದಿನಭತ್ಯೆ ಮತ್ತು ಪ್ರಯಾಣಭತ್ಯೆಗಳ ಕುರಿತಾಗಿ ಮಾಹಿತಿ ನೀಡಿ ಕುಲಸಚಿವರು ಅನುಮೋದನೆಗಾಗಿ ಕೋರಿದರು.<br>ಸದಸ್ಯರುಗಳು ಈ ಕೆಳಕಾಣಿಸಿದಂತೆ ತಮ್ಮ ಅಭಿಪ್ರಾಯಗಳನ್ನು ನೀಡಿದರು.<br>**ಶ್ರೀ ಮಹಾಂತೇಶ ಕಂಬಾರ:**<br>ಈಗಾಗಲೇ ಸಿ.ಡಿ.ಸಿ. ಸಮಿತಿಯನ್ನು ರಚಿಸಲಾಗಿದೆ. ಕಾರಣ, ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿದ ವರದಿಗಳನ್ನು ಮೊದಲು ಸಿ.ಡಿ.ಸಿ. ಸಮಿತಿಯಲ್ಲಿ ವಿಮರ್ಶೆಗೊಂಡ(Review) ನಂತರ ವಿದ್ಯಾವಿಷಯಕ್ ಪರಿಷತ್ ಮತ್ತು ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದು ಸೂಕ್ತ. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕೆಲವು ಮಹಾವಿದ್ಯಾಲಯಗಳಲ್ಲಿ ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಕರುಗಳ ನೇಮಕಾತಿ, ಮೂಲ ಸೌಕರ್ಯ, ರೋಸ್ಟರ್ ನಿರ್ವಹಣೆ ಅಂಶಗಳನ್ನು ಪರಿಶೀಲಿಸುವುದು ಅವಶ್ಯಕವಾಗಿರುತ್ತದೆ ಎಂದರು.<br>ವಿಶೇಷ ಆಹ್ವಾನಿತರಾಗಿ ಆಗಮಿಸಿದ ಪ್ರೊ. ಅಶೋಕ ಡಿಸೋಜಾ, ನಿರ್ದೇಶಕರು, ಸಿ.ಡಿ.ಸಿ. ವಿಭಾಗ ಇವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ-2000 ರಲ್ಲಿ ಸಿ.ಡಿ.ಸಿ. ಸಮಿತಿ ರಚನೆ ಮತ್ತು ವರದಿಗಳನ್ನು ಸದರಿ ಸಮಿತಿಗೆ ವಿಮರ್ಶೆಗೆ ಒಳಪಡಿಸಬೇಕೆಂದು ನಿಯಮಾವಳಿ ಇರುವುದಿಲ್ಲ ಎಂದರು ಹಾಗೂ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ನಿರ್ದೇಶನದಂತೆ 2024-25 ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಿ ವಿವಿಧ ಮಹಾವಿದ್ಯಾಲಯ/ಸಂಶೋಧನಾ ಕೇಂದ್ರಗಳಿಂದ ಮುಂದುವರಿಕೆ/ವಿಸ್ತರಣೆ ಹಾಗೂ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸುವ ಕುರಿತಂತೆ ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು, ಅದರಂತೆ ಅರ್ಜಿಗಳನ್ನು ಸಲ್ಲಿಸಿದ ಮಹಾವಿದ್ಯಾಲಯಗಳಿಗೆ ಕರ್ನಾಟಕ ರಾಜ್ಯ ಅಧಿನಿಯಮ-2000 ರಲ್ಲಿ ತಿಳಿಸಿದಂತೆ ವಿದ್ಯಾವಿಷಯಕ್ ಪರಿಷತ್ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡ 30 ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲಾಗಿದೆ. ಸದರಿ ಸಮಿತಿಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ UUCMS-Portal ನಲ್ಲಿ ರೂಪಿಸಿರುವ ಮಾನದಂಡಗಳನ್ವಯ ಅಂಕಗಳನ್ನು ನಿಗದಿಪಡಿಸಿ ವರದಿಗಳನ್ನು ಶಿಫಾರಸ್ಸು ಮಾಡಿರುತ್ತವೆ. ವರದಿಗಳ ಕುರಿತು ಸಭೆಗೆ ಮಾಹಿತಿ ನೀಡಿದರು ಹಾಗೂ ಕಡಿಮೆ ಅಂಕ ಗಳಿಸಿದ ಮಹಾವಿದ್ಯಾಲಯದವರಿಗೆ Capacity Building Programme ಆಯೋಜಿಸಿ ಸುಧಾರಣೆ ತರಬಹುದು ಎಂದು ಸಲಹೆ ನೀಡಿದರು.<br>**ಶ್ರೀ ರಫೀ ಭಂಡಾರಿ:**<br>ಸ್ಥಳೀಯ ವಿಚಾರಣಾ ಸಮಿತಿಗಳ ಕೆಲವು ಸದಸ್ಯರುಗಳಿಗೆ ಊಟೋಪಚಾರ, ವಸತಿ ಗೃಹ ಮತ್ತು ಇನ್ನಿತರ ಸೌಲಭ್ಯಗಳ ವ್ಯವಸ್ಥೆಯನ್ನು ಭೇಟಿ ನೀಡುವ ಮಹಾವಿದ್ಯಾಲಯ/ಸಂಸ್ಥೆಯವರು ಮಾಡಿರುವುದು ತಮ್ಮ ಗಮನಕ್ಕೆ ಬಂದಿರುತ್ತದೆ. ಕಾರಣ, ಸಭೆಗೆ ಪ್ರಸ್ತುತಪಡಿಸಿದ ವರದಿ ಪಾರದರ್ಶಕವಾಗಿರುವ ಕುರಿತು ಶಂಕೆ ವ್ಯಕ್ತಪಡಿಸಿದರು. ಹಿಂದಿನ ಅನುಪಾಲನಾ ವರದಿ(Compliance Report) ಸಲ್ಲಿಸಲು ತಿಳಿಸಿದರು ಮತ್ತು ಹಲವಾರು ಮಹಾವಿದ್ಯಾಲಯಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿದ್ದು ಪರಿಶೀಲಿಸಲು Intelligence Committee ರಚಿಸುವುದು ಸೂಕ್ತ ಎಂದರು.<br>**ಪ್ರೊ. ಎಸ್. ಬಿ. ಆಕಾಶ:**<br>ತಾವು ಕೂಡ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು ಪರಿಶೀಲನೆ ಸಮಯದಲ್ಲಿ ಮಹಾವಿದ್ಯಾಲಯದ ಹಿಂದಿನ ವರ್ಷದ ಅನುಪಾಲನಾ ವರದಿಯಲ್ಲಿ(Compliance Report) ವಿಧಿಸಿರುವ ಷರತ್ತುಗಳನ್ನು ಪರಿಶೀಲಿಸುತ್ತೇವೆ. ಉದಾಹರಣೆ 1000 ಪುಸ್ತಕಗಳನ್ನು ಖರೀದಿಸಲು ತಿಳಿಸಿದ್ದರೇ, ಸಂಬಂಧಿಸಿದ ದಾಖಲಾತಿ ಮತ್ತು Vouchers ಗಳನ್ನು ಪರಿಶೀಲಿಸುತ್ತೇವೆ ಎಂದರು.<br>**ಡಾ. ಶಾರದಾಮಣಿ ಎಸ್ ಹುಣಶಾಳ:**<br>ತಮ್ಮ ಮಹಾವಿದ್ಯಾಲಯಕ್ಕೆ ಪರಿಶೀಲನೆಗಾಗಿ ಆಗಮಿಸಿದ ಸ್ಥಳೀಯ ತನಿಖಾ ಸಮಿತಿಯು ಪರಿಶೀಲನೆ ಕೈಗೊಂಡ ಸಂದರ್ಭದಲ್ಲಿ ಮಹಾವಿದ್ಯಾಲಯದಿಂದ ಯಾವುದೇ ಊಟೋಪಚಾರ, ವಸತಿ ಗೃಹ ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ ಹಾಗೂ ಸಮಿತಿಯು ಕೂಡ ಈ ಕುರಿತಾಗಿ ಯಾವುದೇ ಬೇಡಿಕೆ ಇಟ್ಟಿರುವುದಿಲ್ಲ ಎಂದರು. |

| | | |
|---|---|---|
| | | ಕುಲಪತಿಗಳು ಮಾತನಾಡಿ, ಸ್ಥಳೀಯ ವಿಚಾರಣಾ ಸಮಿತಿಗಳು ಪ್ರಾಮಾಣಿಕ, ಪಾರದರ್ಶಕವಾಗಿ ವರದಿಗಳನ್ನು ಮಂಡಿಸಬೇಕು. ಕೆಲವು ಕಡೆ ನಡೆದ ಈ ರೀತಿಯ ಪ್ರಸಂಗಗಳು ನಿಜಕ್ಕೂ ಬೇಸರ ತಂದಿದೆ. ಆದರೆ, ಮಹಾವಿದ್ಯಾಲಯಕ್ಕೆ ಭೇಟಿ ನೀಡಿದ ಸಮಿತಿಗಳ ಎಲ್ಲಾ ವರದಿಗಳು ಪಾರದರ್ಶಕವಲ್ಲ ಎಂದು ಹೇಳುವುದು ಸರಿ ಅಲ್ಲ ಎಂದರು.<br><br>ಸದಸ್ಯರುಗಳ ಅಭಿಪ್ರಾಯಗಳನ್ನು ಆಲಿಸಿದ ಸಭೆಯು, 40 ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿದ ಮಹಾವಿದ್ಯಾಲಯಗಳ(ಅನುದಾನಿತ/ಅನುದಾನರಹಿತ) ಪಟ್ಟಿಯನ್ನು ಸಿದ್ಧಪಡಿಸಲು ಸಭೆಯು ಪ್ರೊ. ಅಶೋಕ ಡಿಸೋಜಾ, ನಿರ್ದೇಶಕರು, ಸಿ.ಡಿ.ಸಿ. ವಿಭಾಗ ಇವರಿಗೆ ಸೂಚಿಸಿತು ಹಾಗೂ ಅಂತಹ ಮಹಾವಿದ್ಯಾಲಯಗಳ ಮರು ಪರಿಶೀಲಿಸಿ ವರದಿಯನ್ನು ಸಿದ್ಧಪಡಿಸಲು ಸಿಂಡಿಕೇಟ್ ಸದಸ್ಯರುಗಳನ್ನು ಒಳಗೊಂಡ ಸಮಿತಿ ರಚಿಸಲು ಸಭೆಯು ತೀರ್ಮಾನಿಸಿತು. |
| 03 | 2024/12/02 | 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ವಿವಿಧ ಆಡಳಿತ ಮಂಡಳಿ/ಸಂಘ ಸಂಸ್ಥೆಗಳು/ಸರ್ಕಾರಿ ಮಹಾವಿದ್ಯಾಲಯಗಳು ಆನ್ ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳನ್ನು ಸಭೆಯ ಮುಂದಿಡುವುದು ಹಾಗೂ ಸಂಯೋಜನೆ ಪ್ರಕ್ರಿಯೆಗೆ ಅನುಸಮರ್ಥನೆ ನೀಡುವ ಕುರಿತು. |
| | | **2024–25 ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆಗಳನ್ನು ಪ್ರಾರಂಭಿಸುವಂತೆ ಈಗಾಗಲೇ ವಿಶ್ವವಿದ್ಯಾಲಯಕ್ಕೆ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರವು ತನ್ನ ಪತ್ರಿಕಾ ಪ್ರಟಕಣೆ ಮುಖಾಂತರ ನಿರ್ದೇಶನವನ್ನು ನೀಡಿದ್ದು ಇದರನ್ವಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ದಿನಾಂಕ: 16–10–2024ರಂದು ಅಧಿಸೂಚನೆಯನ್ನು ಹೊರಡಿಸಿ ವಿವಿಧ ಮಹಾವಿದ್ಯಾಲಯ/ಸಂಶೋಧನಾ ಕೇಂದ್ರಗಳಿಂದ ಮುಂದುವರಿಕೆ/ವಿಸ್ತರಣೆ ಹಾಗೂ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಸಂಘ–ಸಂಸ್ಥೆಗಳಿಂದ ದಿನಾಂಕ 16–10–2024ರಿಂದ 16–11–2024ರವರೆಗೆ ಅರ್ಜಿಗಳನ್ನು UUCMS Portal ನಲ್ಲಿ ಸಲ್ಲಿಸಲು ಅವಕಾಶವನ್ನು ನೀಡಲಾಗಿತ್ತು. ಇದರನ್ವಯ, ಈಗಾಗಲೇ ಸಂಯೋಜನೆಗೊಂಡಿರುವ ಈ ಕೆಳಕಂಡ ಜಿಲ್ಲೆಗಳ ಮಹಾವಿದ್ಯಾಲಯಗಳು/ಸಂಘ–ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸಿರುವ ಮಾಹಿತಿಯನ್ನು ಸಭೆಗೆ ನೀಡಲಾಯಿತು.** |

ತೀರ್ಮಾನ

| | ಜಿಲ್ಲೆ | ಮುಂದುವರಿಕೆ/ವಿಸ್ತರಣೆಗಾಗಿ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು | ಹೊಸದಾಗಿ ಪ್ರಾರಂಭಿಸಲು ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು | 2025–26 ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಒಟ್ಟು ಮಹಾವಿದ್ಯಾಲಯಗಳು |
|---|---|---|---|---|
| ಬೆಳಗಾವಿ | **185** | **4** | **189** | **ಬೆಳಗಾವಿ** |
| ವಿಜಯಪುರ | **126** | **4** | **130** | **ವಿಜಯಪುರ** |
| ಒಟ್ಟು | **319** | **8** | **319** | **ಒಟ್ಟು** |

ಮೇಲ್ಕಾಣಿಸಿದ ಮಹಾವಿದ್ಯಾಲಯಗಳ ಅರ್ಜಿಗಳನ್ನು ಪರಿಶೀಲಿಸಿ ಮುಂದಿನ ಸಂಯೋಜನಾ ಪ್ರಕ್ರಿಯೆಗೆ ಸಭೆಯು ಅನುಸಮರ್ಥನೆ ನೀಡಿತು.

| | | |
|---|---|---|
| 03 | 2024/12/03 | 2025–26 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಸಲ್ಲಿಸಿದ ವರದಿಗಳಿಗೆ ಅನುಮೋದನೆ ಕೋರಿರುವ ಕುರಿತು. |
| ತೀರ್ಮಾನ | | **2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆಗಳಾದ ಮುಂದುವರಿಕೆ/ವಿಸ್ತರಣೆ ಹಾಗೂ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಸಂಘ–ಸಂಸ್ಥೆಗಳಿಂದ ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಿಂದ ಸ್ವೀಕರಿಸಿದ ಅರ್ಜಿಗಳ ಪರಿಶೀಲನೆಗಾಗಿ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ, ಪ್ರಕರಣ 60 ರ ಪ್ರಕಾರ ಒಟ್ಟು 30 ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲಾಗಿತ್ತು. ಸದರಿ ಸಮಿತಿಗಳು ಮಹಾವಿದ್ಯಾಲಯಗಳಿಗೆ ಮತ್ತು ಹೊಸ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿದ ಸಂಘ ಸಂಸ್ಥೆಗಳಿಗೆ ಭೇಟಿ ನೀಡಿ UUCMS ಪೋರ್ಟಲ್ ನಲ್ಲಿ ವರದಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು.** |

| ಕ್ರ. ಸಂ | ಜಿಲ್ಲೆ | 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಸಂಯೋಜನೆಗಾಗಿ ಆರ್ಜಿ ಸಲ್ಲಿಸಿದ ಒಟ್ಟು | ಮಹಾವಿದ್ಯಾಲಯಗಳ ಪರಿಶೀಲನೆಗಾಗಿ ರಚಿತವಾದ ಒಟ್ಟು ಸ್ಥಳೀಯ ವಿಚಾರಣಾ ಸಮಿತಿಗಳು | ಸ್ಥಳೀಯ ಪರಿಶೀಲನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿದ ಒಟ್ಟು ಮಹಾವಿದ್ಯಾಲಯ ಗಳ ಸಂಖ್ಯೆ |
|---|---|---|---|---|
| 1 | ಬೆಳಗಾವಿ | 189 | 17 | 189 |
| 2 | ವಿಜಯಪುರ | 130 | 13 | 130 |
| | ಒಟ್ಟು | 319 | 30 | 319 |

ಸ್ಥಳೀಯ ವಿಚಾರಣಾ ಸಮಿತಿಗಳು UUCMS ಪೋರ್ಟಲ್ ಮೂಲಕ ಸಲ್ಲಿಸಿರುವ ದ್ವಿ ಪ್ರತಿ ವರದಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

| | | |
|---|---|---|
| 04 | 2024/12/04 | 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸ್ಥಳೀಯ ವಿಚಾರಣಾ ಸಮಿತಿಯಿಂದ ಶಿಫಾರಸ್ಸುಗೊಂಡ ಹೊಸ ಕಾಲೇಜು/ಹೊಸ ಕೋರ್ಸ/ಹೊಸ ಭಾಷಾ ಐಚ್ಚಿಕ ವಿಷಯ/ಶಾಶ್ವತ ಸಂಯೋಜನೆ/ಸ್ನಾತಕೋತ್ತರ ಕೋರ್ಸುಗಳ ಪ್ರವೇಶ ಮಿತಿ/ಸ್ಥಳಾಂತರ/ಹೆಸರು ಬದಲಾವಣೆ/ಸ್ಥಗಿತ ಕುರಿತು ಸರ್ಕಾರಕ್ಕೆ ಕಳುಹಿಸಲು ಅನುಮೋದನೆ ಕೋರುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಯೋಜನೆಗೊಂಡಿರುವ ಮಹಾವಿದ್ಯಾಲಯಗಳ ಮುಂದುವರಿಕೆ/ವಿಸ್ತರಣೆ ಹಾಗೂ ಹೊಸ ಹೊಸ ಕಾಲೇಜು/ಹೊಸ ಕೋರ್ಸ/ಹೊಸ ಭಾಷಾ ಐಚ್ಚಿಕ ವಿಷಯ/ಶಾಶ್ವತ ಸಂಯೋಜನೆ/ಸ್ನಾತಕೋತ್ತರ ಕೋರ್ಸುಗಳ ಪ್ರವೇಶ ಮಿತಿ/ಸ್ಥಳಾಂತರ/ಹೆಸರು ಬದಲಾವಣೆ/ಸ್ಥಗಿತಗೊಳಿಸುವಿಕೆ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ನೀಡುವ ವರದಿಯ ಆಧಾರದ uucms ಪೋರ್ಟಲ್ ನಲ್ಲಿ ಸ್ವಯಂ ಚಾಲಿತವಾಗಿ ಸಂಯೋಜನಾ ಮಾನದಂಡಗಳನ್ನು ಆಧರಿಸಿ ಅಂಕಗಳನ್ನು ನೀಡಲಾಗುತ್ತದೆ. 2021 ನೇ ಸಾಲಿನ ಸರಕಾರದ ಆದೇಶದನ್ವಯ, ಶೇಕಡಾ. 40 ರಷ್ಟು ಅಂಕ ಪಡೆದ ಮಹಾವಿದ್ಯಾಲಯಗಳು ಶಿಫಾರಸ್ಸುಗೊಳ್ಳಲ್ಪಡುತ್ತವೆ. ಸದರಿ ಮಹಾವಿದ್ಯಾಲಯಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ uucms ಪೋರ್ಟಲ್ ಮುಖಾಂತರ ಸಂಬಂಧಪಟ್ಟ ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ಶಿಫಾರಸ್ಸುಗಳನ್ವಯ ಸರಕಾರಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಬೇಕಾಗಿರುವ ಮಾಹಿತಿಯನ್ನು ಸಭೆಗೆ ನೀಡಲಾಯಿತು.<br>ಈ ಹಿನ್ನೆಲೆಯಲ್ಲಿ ಶಿಫಾರಸ್ಸುಗೊಂಡ ಹೊಸ ಕಾಲೇಜು/ಹೊಸ ಕೋರ್ಸ/ಹೊಸ ಭಾಷಾ ಐಚ್ಚಿಕ ವಿಷಯ/ಶಾಶ್ವತ ಸಂಯೋಜನೆ/ಸ್ನಾತಕೋತ್ತರ ಕೋರ್ಸುಗಳ ಪ್ರವೇಶ ಮಿತಿ/ಸ್ಥಳಾಂತರ/ಹೆಸರು ಬದಲಾವಣೆ/ಸ್ಥಗಿತಗೊಳಿಸುವಿಕೆ ಸ್ಥಳೀಯ ವಿಚಾರಣಾ ಸಮಿತಿಯಿಂದ ಶಿಫಾರಸ್ಸುಗೊಂಡ ಅರ್ಜಿಗಳನ್ನು uucms ಪೋರ್ಟಲ್ ಮುಖಾಂತರ ಸರಕಾರಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.** |
| 05 | 2024/12/05 | 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸ್ಥಳೀಯ ವಿಚಾರಣಾ ಸಮಿತಿಯಿಂದ ಶಿಫಾರಸ್ಸುಗೊಳ್ಳದ ಮಹಾವಿದ್ಯಾಲಯಗಳಿಗೆ ಮರುಪರಿಶೀಲನೆ ಕೈಗೊಳ್ಳಲು ಅನುಮೋದನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಯೋಜನೆಗೊಂಡಿರುವ ಮಹಾವಿದ್ಯಾಲಯಗಳ ಮುಂದುವರಿಕೆ/ವಿಸ್ತರಣೆ ಹಾಗೂ ಹೊಸ ಹೊಸ ಕಾಲೇಜು/ಹೊಸ ಕೋರ್ಸ/ಹೊಸ ಭಾಷಾ ಐಚ್ಚಿಕ ವಿಷಯ/ಶಾಶ್ವತ ಸಂಯೋಜನೆ/ಸ್ನಾತಕೋತ್ತರ ಕೋರ್ಸುಗಳ ಪ್ರವೇಶ ಮಿತಿ/ಸ್ಥಳಾಂತರ/ಹೆಸರು ಬದಲಾವಣೆ/ಸ್ಥಗಿತಗೊಳಿಸುವಿಕೆ ಕುರಿತು ಸ್ಥಳೀಯ ವಿಚಾರಣಾ ಸಮಿತಿಯು ನೀಡುವ ವರದಿಯ ಆಧಾರದ uucms ಪೋರ್ಟಲ್ ನಲ್ಲಿ ಸ್ವಯಂ ಚಾಲಿತವಾಗಿ ಸಂಯೋಜನಾ ಮಾನದಂಡಗಳನ್ನು ಆಧರಿಸಿ ಅಂಕಗಳನ್ನು ನೀಡಲಾಗುತ್ತದೆ. 2021 ನೇ ಸಾಲಿನ ಸರಕಾರದ ಆಧೇಶದನ್ವಯ, ಶೇಕಡಾ. 40 ಕ್ಕಿಂತ ಕಡಿಮೆ ಅಂಕ ಪಡೆದ ಮಹಾವಿದ್ಯಾಲಯಗಳು ಶಿಫಾರಸ್ಸುಗೊಳ್ಳಲ್ಪಡುವುದಿಲ್ಲ. ಈ ತೆರನಾಗಿ ಶಿಫಾರಸ್ಸುಗೊಳ್ಳದ ಮಹಾವಿದ್ಯಾಲಯಗಳ ಮರು ಪರಿಶೀಲನೆಗೆ ಕುರಿತಾಗಿ ಸಭೆಯ ಮಾರ್ಗದರ್ಶನ ಕೋರಲಾಯಿತು.** |

| | | |
|---|---|---|
| | | ಚರ್ಚಿಸಿದ ಸಭೆಯು ಸದರಿ ಮಹಾವಿದ್ಯಾಲಯಗಳ ಪರಿಶೀಲನೆಗಾಗಿ ಸಿಂಡಿಕೇಟ್ ಸಭೆಯ ಸದಸ್ಯರುಗಳನ್ನು ಒಳಗೊಂಡ ಒಂದು ಸಮಿತಿ ರಚಿಸಲು ತೀರ್ಮಾನಿಸಲಾಯಿತು.<br>ಮುಂದುವರೆದು, ಮರು ಪರಿಶೀಲನಾ ಶುಲ್ಕದ ಕುರಿತಾಗಿ ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳು ನಿಗದಿಪಡಿಸಿದ ಅರ್ಜಿ ಶುಲ್ಕಗಳನ್ನು ಪರಿಶೀಲಿಸಿದ ಸಭೆಯು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಮರು ಪರಿಶೀಲನಾ ಶುಲ್ಕವನ್ನು ರೂ.50,000/-ಗಳಿಗೆ ನಿಗದಿಪಡಿಸಲು ತೀರ್ಮಾನಿಸಿತು. |
| 06 | 2024/12/06 | 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಲಿಪಿಕ ಸಿಬ್ಬಂದಿಗಳಿಗೆ ಗೌರವಧನ/ದಿನಭತ್ಯೆ/ಪ್ರಯಾಣಭತ್ಯೆ ನೀಡಲು ಅನುಸಮರ್ಥನೆಗಾಗಿ ಸಭೆಗೆ ಮಂಡಿಸುವ ಕುರಿತು. |
| ತೀರ್ಮಾನ | | ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯಗಳಿಗೆ ಪರಿಶೀಲನೆ ನಡೆಸಲು ರಚಿತವಾದ ಸ್ಥಳೀಯ ವಿಚಾರಣಾ ಸಮಿತಿ/ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡುವ ಅಧ್ಯಕ್ಷರಿಗೆ, ಸದಸ್ಯರಿಗೆ ಮತ್ತು ಲಿಪಿಕ ಸಿಬ್ಬಂದಿಗಳಿಗೆ ಕೆ ಸಿ ಎಸ್ ಆರ್ ನಿಯಮಾವಳಿಗಳುನುಸಾರ ದಿನಭತ್ಯೆ ಮತ್ತು ಪ್ರಯಾಣಭತ್ಯೆ ನೀಡುವುದರ ಜೊತೆಗೆ **2025-26** ನೇ ಶೈಕ್ಷಣಿಕ ಸಾಲಿನಿಂದ ಪ್ರತಿ ಮಹಾವಿದ್ಯಾಲಯಕ್ಕೆ ಅಧ್ಯಕ್ಷರಿಗೆ ರೂ.700/- ಸದಸ್ಯರಿಗೆ ರೂ. 500/- ಲಿಪಿಕ ಸಿಬ್ಬಂದಿ ರೂ.300/-ಗಳ ಗೌರವ ಧನ ಮಂಜೂರು ಮಾಡಲಾಗಿದೆ. ಸದರಿ ವಿಷಯಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು. |
| 07 | 2024/12/07 | ಡಾ. ಹನುಮಂತಪ್ಪ.ಡಿ.ಜಿ. ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಇವರು ಪಿಹೆಚ್.ಡಿ. ಮಾರ್ಗದರ್ಶಕರ ಕರ್ತವ್ಯವನ್ನು ಮರಳಿ ನೀಡುವಂತೆ ಸಲ್ಲಿಸಿರುವ ಮನವಿ ಪತ್ರದ ಕುರಿತು. |
| ತೀರ್ಮಾನ | | ದಿನಾಂಕ: **14.06.2024** ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಡಾ. ಹನುಮಂತಪ್ಪ.ಡಿ.ಜಿ. ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಇವರನ್ನು ಮಾರ್ಗದರ್ಶಕರ ಕರ್ತವ್ಯದಿಂದ ಹೊರಗಿಡಲಾಗಿದೆ. ಪ್ರಸ್ತುತ ಸದರಿಯವರು ತಮ್ಮ ವೃತ್ತಿ ಜೀವನ ಮತ್ತು ಶೈಕ್ಷಣಿಕ ಹಿತದೃಷ್ಠಿಯಿಂದ ಸದರಿ ವಿಷಯವನ್ನು ಪುನರ್ ಪರಿಶೀಲಿಸಿ ಸಂಶೋಧನಾ ಮಾರ್ಗದರ್ಶನ ಕರ್ತವ್ಯವನ್ನು ಮರಳಿ ನೀಡಬೇಕೆಂದು ವಿನಂತಿಸಿರುವ ವಿಷಯವನ್ನು ಪರಿಶೀಲಿಸಿದ ಸಭೆಯು ಡಾಕ್ಟರಲ್ ಕಮಿಟಿಗೆ ಮಂಡಿಸುವಂತೆ ಸೂಚಿಸಿತು. |
| 08 | 2024/12/08 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಂದ Alumini Association ಕಾರ್ಯನಿರ್ವಹಣೆಗಾಗಿ ಶುಲ್ಕ ಆಕರಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ NAAC ಹಾಗೂ NIRF ಅಡಿಯಲ್ಲಿ ಉತ್ತಮ ಅಂಕಗಳನ್ನು ಗಳಿಸಲು Alumini Association ಅವಶ್ಯಕತೆ ಇರುತ್ತದೆ. ಕಾರಣ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ, ವಿಜಯಪುರ ಸ್ನಾತಕೋತ್ತರ ಕೇಂದ್ರ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಪ್ರಸ್ತುತ ಅಧ್ಯಯನ ನಡೆಸುತ್ತಿರುವ ಪ್ರಥಮ ವರ್ಷಕ್ಕೆ ರೂ.250/- ಹಾಗೂ ತೃತೀಯ ವರ್ಷಕ್ಕೆ ರೂ.500/-ಗಳಂತೆ ವಿದ್ಯಾರ್ಥಿಗಳಿಂದ ಆಕರಿಸಲು ಕೋರಲಾಯಿತು.<br>ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಮಾತನಾಡಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಂದ Alumini Association ಶುಲ್ಕವನ್ನು ಭರಿಸಲು ಆಕ್ಷೇಪಣೆ ವ್ಯಕ್ತಪಡಿಸಿದರು. ತೃತೀಯ ವರ್ಷದ ವಿದ್ಯಾರ್ಥಿಗಳು ಅಧ್ಯಯನ ಮುಗಿಸಿಕೊಂಡು ಹೋಗುವುದರಿಂದ ಸದರಿ ವಿದ್ಯಾರ್ಥಿಗಳಿಗೆ ಸಂಬಂಧಪಡುವುದರಿಂದ ತೃತೀಯ ವರ್ಷದ ವಿದ್ಯಾರ್ಥಿಗಳಿಂದ ಮಾತ್ರ ರೂ.500/-ಗಳನ್ನು ಆಕರಿಸಲು ಸಲಹೆ ನೀಡಿದರು.<br>ಚರ್ಚಿಸಿದ ಸಭೆಯು, ಪ್ರಸ್ತುತ ಸಾಲಿನಿಂದ ತೃತೀಯ ವರ್ಷಕ್ಕೆ ಮಾತ್ರ ರೂ.500/-ಗಳಂತೆ ವಿದ್ಯಾರ್ಥಿಗಳಿಂದ ಆಕರಿಸಲು ಸಭೆಯು ತೀರ್ಮಾನಿಸಿತು. |
| 09 | 2024/12/09 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024-25 ನೇ ಸಾಲಿನ 2ನೇ ಖರೀದಿ ಸಮಿತಿ ಸಭೆಯ ಶಿಫಾರಸ್ಸುಗಳಿಗೆ ಅನುಮೋದನೆ ನೀಡುವ ಕುರಿತು. |
| ತೀರ್ಮಾನ | | ದಿನಾಂಕ: 18.10.2024 ರಂದು ಜರುಗಿದ ಎರಡನೇ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಯಿತು.<br>ಸದಸ್ಯರಾದ ಶ್ರೀ ಈರಣ್ಣ ಹಪ್ಪಲಿ ಇವರು Tender Technical Committee ಯ ತಾವು ಸದಸ್ಯರಾಗಿ ಒಂದು ಬಾರಿ ಮಾತ್ರ ಸಭೆಗೆ ಹಾಜರಾಗಿರುತ್ತೇನೆ. ತದನಂತರ ಯಾವುದೇ ಸಭೆಗೆ ತಮ್ಮನ್ನು |

| | |
|---|---|
| | ಆಹ್ವಾನಿಸಿರುವುದಿಲ್ಲ. ಎಪ್ರಿಲ್–2024 ರಲ್ಲಿ 1ನೇ ಖರೀದಿ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಖರೀದಿ ಕುರಿತಾಗಿ ದಾಖಲಾತಿಗಳನ್ನು ಪ್ರಸ್ತುತಪಡಿಸಲು ಸಂಬಂಧಿಸಿದ ಸಹಾಯಕ ಕುಲಸಚಿವರಿಗೆ ಹಲವಾರು ಬಾರಿ ತಿಳಿಸಿದರೂ ದಾಖಲಾತಿ ನೀಡಿರುವುದಿಲ್ಲ. ಕಾರಣ, 2ನೇ ಖರೀದಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ತಡೆಹಿಡಿಯಲು ತಿಳಿಸಿದರು.<br>ಪ್ರತಿಕ್ರಿಯಿಸಿದ ಕುಲಸಚಿವರು, ಏಪ್ರಿಲ್–2024 ರ ನಂತರ ಯಾವುದೇ ಸಭೆಯನ್ನು ಆಯೋಜನೆ ಮಾಡಿರುವುದಿಲ್ಲ ಮತ್ತು ಒಂದು ವರ್ಷದ ಅವಧಿಗೆ ಮಾತ್ರ ಸದಸ್ಯತ್ವ ಅವಧಿ ಇರುವುದರಿಂದ ತಮ್ಮ ಅವಧಿ ಮುಕ್ತಾಯವಾಗಿರುತ್ತದೆ ಎಂದು ತಿಳಿಸಿದರು. ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಯಾವುದೇ ಸದಸ್ಯರು ಕಛೇರಿಗೆ ಭೇಟಿ ನೀಡಿ ಕಡತಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿರುವ ತೀರ್ಮಾನದ ಕುರಿತಾಗಿ ಸಭೆಯ ಗಮನಕ್ಕೆ ತಂದರು ಹಾಗೂ ಶ್ರೀ ವಿನೀತ್ ಜೋಶಿ ಇವರು ಲ್ಯಾಪ್‌ಟಾಪ್ ಖರೀದಿಗೆ ಸಂಬಂಧಿಸಿದ ಆಕ್ಷೇಪಣೆಗೆ ಕಡತಗಳನ್ನು ಖುದ್ದಾಗಿ ಪರಿಶೀಲಿಸಿದ್ದು ಯಾವುದೇ ನ್ಯೂನತೆ ಕಂಡು ಬಂದಿರುವುದಿಲ್ಲ ಎಂದರು. ಮುಂದುವರೆದು, 1ನೇ ಖರೀದಿ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡು ಖರೀದಿಸಲಾದ ಸಾಮಗ್ರಿಗಳ ಪಟ್ಟಿಯನ್ನು ಸದಸ್ಯರುಗಳಿಗೆ ನೀಡಿದರು.<br>ಶ್ರೀ ಮಹಾಂತೇಶ ಕಂಬಾರ ಇವರು ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಕಛೇರಿ ಪರಿಕರಗಳು ಮತ್ತು ಖರೀದಿ ಮಾಡಬೇಕಾದ ಪರಿಕರಗಳ ಪಟ್ಟಿಯನ್ನು ಸಲ್ಲಿಸಲು ತಿಳಿಸಿ, ಅಂಕಿ–ಅಂಶಗಳನ್ನು ಪರೀಶೀಲಿಸಿದ ನಂತರ ಕ್ರಮ ಕೈಗೊಳ್ಳುವುದು ಸೂಕ್ತ ಎಂದು ಈ ವಿಷಯಸೂಚಿಯನ್ನು ತಡೆಹಿಡಿಯಲು ಮನವಿ ಮಾಡಿದರು.<br>1ನೇ ಖರೀದಿ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡು ಖರೀದಿಸಲಾದ ಸಾಮಗ್ರಿಗಳ ಪಟ್ಟಿಯನ್ನು ಪರಿಶೀಲಿಸಿದ ಸದಸ್ಯರುಗಳು, 01 ಹವಾನಿಯಂತ್ರಣ(AC) ಖರೀದಿಗೆ ರೂ.1,47,000/–ಗಳು ವೆಚ್ಚವಾಗುತ್ತಾ? ಎಂದು ಪ್ರಶ್ನಿಸಿದರು. ಕುಲಸಚಿವರು(ಮೌಲ್ಯಮಾಪನ) ಇವರು ಪರೀಕ್ಷಾ ವಿಭಾಗಕ್ಕೆ 02 ಟನ್ ಸಾಮರ್ಥ್ಯ ಇರುವ ಒಂದು ಹವಾನಿಯಂತ್ರಣ(AC) ವನ್ನು ನೀಡಲಾಗಿದೆ ಎಂದರು. ಈ ಕುರಿತಾಗಿ ಮಾಹಿತಿ ನೀಡಲು ಆಗಮಿಸಿದ ಡಾ. ಶ್ರೀನಿವಾಸ್ ಹಡಾಡಿ, ಸಹಾಯಕ ಕುಲಸಚಿವರು ಇವರು 03 ಹವಾನಿಯಂತ್ರಣ(AC) ಖರೀದಿಸಲಾಗಿದೆ ಎಂದು ಮಾಹಿತಿ ನೀಡಿದರು. ಕಡತವನ್ನು ಪರಿಶೀಲಿಸಿದ ಕುಲಸಚಿವರು 04 ಹವಾನಿಯಂತ್ರಣ(AC) ಖರೀದಿಸಿದ್ದು ಎರಡು ಟನ್ ಪರೀಕ್ಷಾ ವಿಭಾಗ–01 AC, 1.5 ಟನ್ ಗಣಕಯಂತ್ರ ಪ್ರಯೋಗಾಲಯ–03 ಹವಾನಿಯಂತ್ರಣ(AC) ನೀಡಿರುವುದಾಗಿ ತಿಳಿಸಿದರು. ಸಿಂಡಿಕೇಟ್ ಸಭೆಗೆ ಅಪೂರ್ಣ ಮಾಹಿತಿ ನೀಡಿದ ಸಹಾಯಕ ಕುಲಸಚಿವರು ಇವರಿಗೆ ವಿವರಣೆ ಕೇಳಲು ಸಭೆಯು ಸೂಚಿಸಿತು ಹಾಗೂ ಈ ವಿಷಯಸೂಚಿಯನ್ನು ಮುಂದೂಡಲು ಸಭೆಯು ತೀರ್ಮಾನಿಸಿತು. |
| ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು | |
| | ಶ್ರೀ ರಫಿ ಭಂಡಾರಿ, ಸಿಂಡಿಕೇಟ್ ಸದಸ್ಯರು, ಇವರು ಪ್ರಸ್ತಾಪಿಸಿರುವ ವಿಷಯಗಳು: |
| 2024/12/I | ಅ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಅಳವಡಿಸಿರುವ UUCMS ಸಾಫ್ಟವೇರ್‌ನಿಂದ ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಭರಿಸುವಲ್ಲಿ, ಅಂಕಪಟ್ಟಿಗಳು, ಮತ್ತಿತರ ದಾಖಲೆಗಳನ್ನು ಪಡೆದುಕೊಳ್ಳಲು ಸಮಸ್ಯೆಗಳಾಗುತ್ತಿರುವುದರಿಂದ ಇದರ ಪರಿಹಾರಕ್ಕಾಗಿ ವಿಶ್ವವಿದ್ಯಾಲಯದಿಂದ ನಿಯೋಗವನ್ನು ರಚಿಸಲು ಮನವಿ ಮಾಡಿದ ಹಿನ್ನೆಲೆಯಲ್ಲಿ ಸಭೆಯು ಒಪ್ಪಿಗೆ ಸೂಚಿಸಿತು. |
| 2024/12/II | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳು ಮತ್ತು ವಿದ್ಯಾರ್ಥಿಗಳು ಭರಿಸುವ ವಿವಿಧ ಶುಲ್ಕಗಳನ್ನು ಆಫ್‌ಲೈನ್(ಚಲನ) ಮೂಲಕ ಭರಿಸಲು ಅನುಮತಿ ನೀಡುವ ಕುರಿತು. |
| ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು 2021–22 ನೇ ಸಾಲಿನಿಂದ ಎಲ್ಲ ಸ್ನಾತಕ ಕೋರ್ಸ್‌ಗಳಿಗೆ ಎನ್.ಇ.ಪಿ–2020 ಪಠ್ಯಕ್ರಮವನ್ನು ಅಳವಡಿಸಿಕೊಂಡಿದ್ದು, ವಿದ್ಯಾರ್ಥಿಗಳು ಪ್ರವೇಶಾತಿ, ಪರೀಕ್ಷಾ ಶುಲ್ಕ ಮತ್ತು ಮಹಾವಿದ್ಯಾಲಯಗಳ ಸಂಯೋಜನಾ ಶುಲ್ಕಗಳನ್ನು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಭರಿಸಲಾಗುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ನಡೆದ ಸ್ನಾತಕ ಪ್ರವೇಶಾತಿ ಸಂದರ್ಭದಲ್ಲಿ ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್. ನಲ್ಲಿ ಪ್ರವೇಶಾತಿ ಶುಲ್ಕವನ್ನು ಭರಿಸುವಾಗ ಸುಮಾರು ವಿದ್ಯಾರ್ಥಿಗಳ ಶುಲ್ಕವು ಕಡಿತಗೊಂಡು ಮತ್ತು ಶುಲ್ಕವನ್ನು ಭರಿಸಲು ತೋರಿಸುತ್ತಿರುವುದರಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸಿದ್ದಾರೆ. ಪ್ರಸ್ತುತ ದಿನಾಂಕ: 11.11.2024 ರಿಂದ ವಿದ್ಯಾರ್ಥಿಗಳು 1, 3 ಮತ್ತು 5ನೇ ಸೆಮಿಸ್ಟರ್‌ಗಳ ಪರೀಕ್ಷಾ ಶುಲ್ಕವನ್ನು |

| | | |
|---|---|---|
| | | ಭರಿಸುತ್ತಿದ್ದು, ಸುಮಾರು 2500 ವಿದ್ಯಾರ್ಥಿಗಳ ಶುಲ್ಕ ಕಡಿತಗೊಂಡು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅನೇಕ ಬಾರಿ ಬೆಂಗಳೂರಿನಲ್ಲಿ ಯು.ಯು.ಸಿ.ಎಂ.ಎಸ್. ತಂತ್ರಾಂಶ ನಿರ್ವಹಿಸುವ ಸಿಬ್ಬಂದಿ ಮತ್ತು ಅಧಿಕಾರಿಗಳ ಗಮನಕ್ಕೆ ತಂದರೂ ಸಹ, ಸರ್ವರ್ ಸಮಸ್ಯೆ ಇರುವುದರಿಂದ ವಿದ್ಯಾರ್ಥಿಗಳು ಶುಲ್ಕ ಭರಿಸಲು ತೊಂದರೆಯಾಗುತ್ತಿರುವ ಮಾಹಿತಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು.<br>ಮುಂದುವರೆದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರವೇಶಾತಿ ಶುಲ್ಕ, ಪರೀಕ್ಷಾ ಶುಲ್ಕ ಮತ್ತು ಮಹಾವಿದ್ಯಾಲಯಗಳ ಸಂಯೋಜನಾ ಶುಲ್ಕಗಳನ್ನು ಸರ್ವರ್, ಮತ್ತಿತರ ತಾಂತ್ರಿಕ ಸಮಸ್ಯೆ ಕಾಲಕ್ಕೆ ಮಾತ್ರ ಚಲನ್(ಆಫ್‌ಲೈನ್) ಮೂಲಕ ವಿಶ್ವವಿದ್ಯಾಲಯದ ಸಂಬಂಧಪಟ್ಟ ಉಳಿತಾಯ ಖಾತೆಗಳಿಗೆ ಭರಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು. ಮುಂದುವರೆದು ಸದರಿ ವಿಷಯದ ಬಗ್ಗೆ ಸರ್ಕಾರಕ್ಕೆ ಪತ್ರದ ಮೂಲಕ ತಿಳಿಸಲು ಸೂಚಿಸಿತು. |
| | 2024/12/ III | ದಿನಾಂಕ: 30.11.2024 ರಂದು ನಡೆದ Works Committee ಸಭೆಯ ನಡಾವಳಿಗಳ ಅನುಮೋದನೆ ಕುರಿತು. |
| | ತೀರ್ಮಾನ | ದಿನಾಂಕ: **30.11.2024** ರಂದು ನಡೆದ **Works Committee** ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| | 2024/12/ IV | Providing and fixing of Street Lights and High Mast Lamps for RCU, Main Campus, Belagavi ಕಾಮಗಾರಿಯನ್ನು ಕೈಗೊಳ್ಳುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಮುಖ್ಯ ಆವರಣದಲ್ಲಿ ಬೀದಿ ದೀಪಗಳನ್ನು **High Mast Lamps** ಗಳನ್ನು ಅಳವಡಿಸುವುದು ಅವಶ್ಯವಿರುವುದರಿಂದ **Providing and fixing of Street Lights and High Mast Lamps for RCU, Main Campus, Belagavi** ಕಾಮಗಾರಿಯನ್ನು ಅಂದಾಜು ಮೊತ್ತ ರೂ.5,00,000/-ಕ್ಕೆ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |
| | 2024/12/ V | Repair works to Doors and other Minor Works in Bathrooms of Bramhaputra Hostel At RCU, Belagavi ಕಾಮಗಾರಿಯನ್ನು ಕೈಗೊಳ್ಳುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಮುಖ್ಯ ಆವರಣದಲ್ಲಿರುವ ಬ್ರಹ್ಮಪುತ್ರ ವಸತಿ ನಿಲಯದಲ್ಲಿನ ಬಾಗಿಲುಗಳು ಹಾಗೂ ಪೈಪ್‌ಲೈನ್‌ಗಳ ದುರಸ್ತಿ ಕಾರ್ಯ ಅವಶ್ಯವಿರುವುದರಿಂದ **Repair works to Doors and other Minor Works in Bathrooms of Bramhaputra Hostel At RCU, Belagavi** ಕಾಮಗಾರಿಯನ್ನು ಅಂದಾಜು ಮೊತ್ತ ರೂ.5,00,000/-ಕ್ಕೆ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |
| | 2024/12/ VI | PM Usha MERU ಅಡಿಯಲ್ಲಿನ Renovation Components ಗಳನ್ನು PWD-PRAMC ಇವರಿಂದ ಹಿಂಪಡೆಯಲು ಮನವಿ ಸಲ್ಲಿಸಲು ಅನುಮೋದನೆ ಕೋರಿರುವ ಕುರಿತು. |
| | ತೀರ್ಮಾನ | **PM Usha MERU** ಅಡಿಯಲ್ಲಿ ಮಂಜೂರಾದ 100 ಕೋಟಿ ಅನುದಾನದಲ್ಲಿ ಈಗಾಗಲೇ ಹಿರೇಬಾಗೇವಾಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಯೋಜನೆಯಡಿಯಲ್ಲಿ **Infrastructure New Construction** ಗೆ ರೂ.60,15,00,076/- ಮತ್ತು **Infrastructure Renovation** ಗೆ ರೂ.7,84,99,924/- ಗಳನ್ನು ಒಟ್ಟು ರೂ. 68 ಕೋಟಿಗಳಷ್ಟು ಕಟ್ಟಡ ಕಾಮಗಾರಿಗಳಿಗೆ ಮೀಸಲಿಡಲಾಗಿದ್ದು ಸದರಿ ಎರಡು ಘಟಕಗಳಲ್ಲಿನ ಕಟ್ಟಡ ಕಾಮಗಾರಿ ಕೈಗೊಳ್ಳಲು ಕಾರ್ಯನಿರ್ವಾಹಕ ನಿರ್ದೇಶಕರು, **KSHEC** ಇವರ ಆದೇಶಿಸಿದಂತೆ **DPR** ನ್ನು **PWD-PRAMC** ಇವರಿಗೆ ಹಸ್ತಾಂತರಿಸಿ ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದೆ. ಸದರಿ **DPR** ನಲ್ಲಿನ **Infrastructure Renovation Components** ನ್ನು ಪ್ರಸ್ತುತ ಆ ಮ ಕು ಕ ಇಲಾಖೆ ಇವರ ವತಿಯಿಂದ ಚಾಲ್ತಿಯಲ್ಲಿರುವ ಕಟ್ಟಡಗಳಿಗೆ ಸೌಲಭ್ಯ ಒದಗಿಸಲು ಮೀಸಲಿಡಲಾಗಿದ್ದು ಇಲ್ಲಿಯವರೆಗೂ ಪ್ರಸ್ತುತ ಕಟ್ಟಡಗಳು ವಿಶ್ವವಿದ್ಯಾಲಯದ ಸ್ವಾಧೀನಕ್ಕೆ ಹಸ್ತಾಂತರವಾಗಿರುವುದಿಲ್ಲ. ಮುಂದುವರೆದು, **Infrastructure Renovation Component** ನ್ನು ಮರುಪರಿಶೀಲಿಸಿ ಪರಿಷ್ಕೃತ ಐಟಂಗಳ ವಿವರಣೆ ಈ ಕೆಳಗಿನಂತಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು. |

| | | | |
|---|---|---|---|
| | | 1 | Solar Paneling |
| | | 2 | ICT Class Rooms |
| | | 3 | Upgradation of various facilities for departments at New Campus |
| | | 4 | Main building roofing sheets and false ceiling |
| | | 5 | Upgradation of of IT infrastructure of New campus |
| | | | ಚರ್ಚಿಸಿದ ಸಭೆಯು, ಎರಡು ಘಟಕಗಳಲ್ಲಿನ ಕಟ್ಟಡ ಕಾಮಗಾರಿ ಟೆಂಡರ ಒಂದೇ ಸಮಯದಲ್ಲಿ ನಡೆಸುವುದು ಸರಿಯಲ್ಲ, ಪ್ರಸ್ತುತ ಆ ಮ ಕು ಕ ಇಲಾಖೆ ಇವರ ವತಿಯಿಂದ ಚಾಲ್ತಿಯಲ್ಲಿರುವ ಕಟ್ಟಡಗಳು ಪೂರ್ಣಗೊಂಡು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಗೊಂಡ ನಂತರ ' Infrastructure Renovation ಗೆ ಸಂಬಂಧಿಸಿದ ಕಾಮಗಾರಿ ಕೈಗೆತ್ತಿಕೊಳ್ಳುವುದು ಸೂಕ್ತ ಎಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ Renovation Components ಗಳನ್ನು PWD-PRAMC ಇವರಿಂದ ಸದರಿ ಕಾಮಗಾರಿಯನ್ನು ಹಿಂಪಡೆಯಲು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರಿಗೆ ಪತ್ರ ಬರೆಯಲು ಸಭೆಯು ಸೂಚಿಸಿತು. |
| | 2024/12/ VII | | Survey for Mass Excavation undertaken by H&FWD in Phase-1 project at New Campus RCU, Hirebagewadi, Belagavi ಕಾಮಗಾರಿ ಕೈಗೊಳ್ಳುವ ಕುರಿತು |
| | ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಮುಖ್ಯ ಆವರಣ, ಹಿರೇಬಾಗೇವಾಡಿ, ಬೆಳಗಾವಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಂದ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ವಿಶ್ವವಿದ್ಯಾಲಯದ ನೂತನ ಆವರಣದ 4 ಎಕರೆಯಲ್ಲಿ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡವನ್ನು ಲೋಕೋಪಯೋಗಿ ಇಲಾಖೆ ಇವರು ವತಿಯಿಂದ ನಿರ್ಮಿಸಲಾಗುತ್ತಿದ್ದು, ಸದರಿ ಗುತ್ತಿಗೆದಾರರು ಭೂಮಿಯನ್ನು ಅಗೆಯುತ್ತಿದ್ದು ಈಗಾಗಲೇ ತಗ್ಗು ಪ್ರದೇಶವಾಗಿರುವುದರಿಂದ ವಿಶ್ವವಿದ್ಯಾಲಯಕ್ಕೆ ಹಾನಿ ಉಂಟಾಗುತ್ತಿದೆ. ಕಾರಣ Survey ಮಾಡಿಸಲು ಕಾಮಗಾರಿಯನ್ನು ಕೈಗೊಳ್ಳುವುದು ಅವಶ್ಯವಿರುತ್ತದೆ. ಕಾರಣ ಅಂದಾಜು ರೂ. 5 ಲಕ್ಷಕ್ಕೆ ಸೀಮಿತವಾಗಿಸಿ ಸಮಗ್ರ ಸರ್ವೇ ಕಾರ್ಯವನ್ನು ನಿಯಮಾನುಸಾರ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |
| | 2024/12/ VIII | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಹೊಸದಾಗಿ ನಿರ್ಮಿಸಲಾದ ಬಯಲು ವೇದಿಕೆಗೆ ಹೆಸರನ್ನು ಸೂಚಿಸುವ ಕುರಿತು. |
| | ತೀರ್ಮಾನ | | ಬೆಳಗಾವಿ ಜಿಲ್ಲೆಯ 'ಸವದತ್ತಿ' ತಾಲ್ಲೂಕಿನ "ಏಣಗಿ" ಗ್ರಾಮದ ಒಕ್ಕಲ್ಲುತನದ ಕುಟುಂಬದಲ್ಲಿ ಜನಿಸಿದ ಹಿರಿಯ ರಂಗಕರ್ಮಿ "ಏಣಗಿ ಬಾಳಪ್ಪ" ಇವರ ಹೆಸರನ್ನು ವೇದಿಕೆ ಇಡಲು ಸಭೆಯು ಸುದೀರ್ಘವಾಗಿ ಚರ್ಚಿಸಿ ಅನುಮೋದನೆ ನೀಡಿತು. |
| | 2024/12/ IX | | 13ನೇ ಘಟಿಕೋತ್ಸವದ ಪೂರ್ವ ತಯಾರಿಗಾಗಿ ವಿವಿಧ ಕಾರ್ಯಗಳನ್ನು ನಿಯಮಾವಳಿ ಅನುಸರಿಸಿ ಕ್ರಮಕೈಗೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದ ಕುರಿತು. |
| | ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 13 ನೇ ವಾರ್ಷಿಕ ಘಟಿಕೋತ್ಸವವನ್ನು ನಡೆಸಲು ಪೂರ್ವ ತಯಾರಿಗಾಗಿ ಈ ಕೆಳಕಾಣಿಸಿದ ಕಾರ್ಯಗಳನ್ನು ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |
| | | ಸಂ | ಘಟಿಕೋತ್ಸವದ ಮುಖ್ಯ ಅತಿಥಿಗಳ ಹೆಸರುಗಳನ್ನು ನಾಮನಿರ್ದೇಶನ ಮಾಡುವುದು |
| | | 1 | ಗೌರವ ಡಾಕ್ಟರೇಟ್‌ಗೆ ಸಂಬಂಧಿಸಿದಂತೆ ಪರಿಶೀಲನಾ ಸಮಿತಿಗೆ ಓರ್ವ ಸದಸ್ಯರನ್ನು ನಾಮನಿರ್ದೇಶನ ಮಾಡುವುದು. |
| | | 2 | ಖಾದಿ ಉಡುಪು ತಯಾರಿ |
| | | 3 | ಸುವರ್ಣ ಪದಕ |
| | | 4 | ಅರ್ಹತಾ ಪುಸ್ತಕ, ಆಮಂತ್ರಣ ಪತ್ರಿಕೆ ಮತ್ತು ಇತರೆ ಮುದ್ರಣಗಳು |
| | | 5 | ಊಟ-ಉಪಹಾರ |
| | | 6 | ಶಾಮಿಯಾನ ವ್ಯವಸ್ಥೆ |
| | | 7 | ದೀಪಾಲಂಕಾರ |
| | | 8 | ಫೋಟೋಗ್ರಾಫಿ ಮತ್ತು ವಿಡಿಯೋಗ್ರಾಫಿ |

<table>
<tr><td></td><td></td><td>9 | ಇನ್ನಿತರೆ ಕಾರ್ಯಗಳು<br>12 ನೇ ವಾರ್ಷಿಕ ಘಟಿಕೋತ್ಸವದ ಗೌರವ ಡಾಕ್ಟರೇಟ್‌ಗೆ ಶಿಫಾರಸ್ಸು ಮಾಡಲಾದ ಗಣ್ಯರ ಹೆಸರುಗಳನ್ನು 13 ನೇ ವಾರ್ಷಿಕ ಘಟಿಕೋತ್ಸವಕ್ಕೂ ಮುಂದುರೆಸಲು ಸಭೆಯು ಸೂಚಿಸಿತು.</td></tr>
<tr><td></td><td>2024/12/ X</td><td>PM Usha MERU ಅಡಿಯಲ್ಲಿ ಬರುವ Component ಗಳ DPR ನ್ನು ಪರಿಷ್ಕರಿಸುವ ಕುರಿತು</td></tr>
<tr><td></td><td>ತೀರ್ಮಾನ</td><td>PM Usha MERU ಅಡಿಯಲ್ಲಿ ಬರುವ Component ಗಳಾದ New Constructions, Renovation, Equipments, Soft Component ಇವರುಗಳನ್ನು ಮತ್ತೊಮ್ಮೆ ಪರಿಶೀಲಿಸಿ ಇನ್ನಷ್ಟು ವಿಭಾಗಗಳ ಬೇಡಿಕೆಗಳನ್ನು ಒಳಗೊಡಿಸಿ ಮತ್ತು ಅತೀ ಅವಶ್ಯ ಇಲ್ಲದೇ ಇರುವಂತಹ ಸಾಧನಗಳನ್ನು ಕೈಬಿಡಲು ಸೂಚಿಸಿ ಬದಲಾವಣೆಗಳನ್ನು ತಯಾರಿಸಿ ಪರಿಷ್ಕೃತ DPR ನ್ನು ರಚಿಸಿರುತ್ತಾರೆ. ವಿವರಗಳು ಈ ಕೆಳಗಿನಂತಿದೆ.
<table>
<tr><th>ಸಂ</th><th>ವಿವರಣೆ</th><th>ಮೊತ್ತ</th></tr>
<tr><td>1</td><td>New Constructions,</td><td>59,26,65,419</td></tr>
<tr><td>2</td><td>Renovation</td><td>12,30,34,580</td></tr>
<tr><td>3</td><td>Equipments</td><td>26,91,71,653</td></tr>
<tr><td>4</td><td>Soft Component</td><td>1,51,28,348</td></tr>
<tr><td></td><td>Total</td><td>100,00,00,000</td></tr>
</table></td></tr>
<tr><td></td><td>2024/12/ XI</td><td>ಜ್ಯೋತಿಬಾ ಪುಲೆ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ರಚಿಸಲು ಸಭೆಯು ಅನುಮೋದನೆ ನೀಡಿತು. ಮುಂದುವರೆದು, ಈ ಕುರಿತಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿತು.</td></tr>
<tr><td></td><td>2024/12/ XII</td><td>ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಲೆ ಮತ್ತು ಸಮಾಜ ಸುಧಾರಕ, ಮೊದಲ ಮುಸ್ಲಿಂ ಮಹಿಳಾ ಶಿಕ್ಷಕಿ ಫಾತಿಮಾ ಶೇಖ್ ಇವರುಗಳ ಜನ್ಮದಿನಗಳ(03.01.1831 & 09.01.1831) ಪ್ರಯುಕ್ತ ಜನವರಿ 2025 ರಲ್ಲಿ ವಿಶ್ವವಿದ್ಯಾಲಯದಲ್ಲಿ ಅದ್ಧೂರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಶ್ರೀ ಮಹಾಂತೇಶ ಕಂಬಾರ ಇವರು ಮನವಿ ಮಾಡಿದ ಹಿನ್ನೆಲೆಯಲ್ಲಿ, ಸಭೆಯು ಅನುಮೋದನೆ ನೀಡಿತು.</td></tr>
<tr><td></td><td>2024/12/ XIII</td><td>ವಿಶ್ವವಿದ್ಯಾಲಯದ ವೈದ್ಯಾಧಿಕಾರಿಗಳು ಕಛೇರಿ ಅವಧಿಯಲ್ಲಿ(10 ರಿಂದ 5.30) ಮಾತ್ರ ಸೇವೆ ಸಲ್ಲಿಸುತ್ತಿದ್ದಾರೆ. ತದನಂತರದ ಅವಧಿಯಲ್ಲಿ ವಿದ್ಯಾರ್ಥಿಗಳ ಆರೋಗ್ಯದಲ್ಲಿ ಸಮಸ್ಯೆಗಳು ಸಂಭವಿಸಿದರೆ ಭೂತರಾಮನಹಟ್ಟಿ ಅಥವಾ ಬೆಳಗಾವಿಗೆ ಹೋಗಬೇಕಾಗುತ್ತದೆ. ಕಾರಣ, ಪ್ರಸ್ತುತ ಇರುವ ವೈದ್ಯಾಧಿಕಾರಿಗಳಿಗೆ Shiftwise Duty ವಹಿಸಲು ಶ್ರೀ ಮಹಾಂತೇಶ ಕಂಬಾರ ಇವರು ಸಲಹೆ ನೀಡಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು.</td></tr>
<tr><td></td><td>2024/12/ IVX</td><td>ಹಣಕಾಸಿನ ವಿಷಯದಲ್ಲಿ ಹೆಚ್ಚಿನ ಪಾರದರ್ಶಕತೆ ತರಲು ವಿಶ್ವವಿದ್ಯಾಲಯದ ಬಜೆಟ್ ಪ್ರತಿಯನ್ನು Website ನಲ್ಲಿ ಅಳವಡಿಸಲು ಶ್ರೀ ಮಹಾಂತೇಶ ಕಂಬಾರ ಇವರು ಸಲಹೆ ನೀಡಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು.</td></tr>
<tr><td></td><td>2024/12/ XV</td><td>ಮೂಲ ಸೌಕರ್ಯಗಳಿಗೆ ಸಂಬಂಧಿಸಿದಂತೆ ನೀರು, ವಿದ್ಯುತ ಪೈಪಲೈನ ದುರಸ್ತಿಗೊಂಡರೆ ತುರ್ತಾಗಿ ರಿಪೇರಿ ಕಾರ್ಯ ಕೈಗೊಳ್ಳಬೇಕಾಗುತ್ತದೆ. ಹೀಗೆ ತುರ್ತಾಗಿ ಜರುಗಿಸಬೇಕಾದ ಮೂಲ ಸೌಕರ್ಯಗಳ ಕಾಮಗಾರಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆದುಕೊಂಡು ನಂತರ ಕೈಗೊಳ್ಳಲು ವಿಳಂಭವಾಗುತ್ತದೆ. ಕಾರಣ, ಆಡಳಿತ ಹಿತದೃಷ್ಟಿಯಿಂದ ಮೂಲ ಸೌಕರ್ಯ/ಸೌಲಭ್ಯಗಳಿಗೆ ಸಂಬಂಧಿಸಿ ತುರ್ತಾಗಿ ಜರುಗಿಸಬೇಕಾದ ಅಂದಾಜು ರೂ. 5 ಲಕ್ಷ ಒಳಗಿನ ಕಾಮಗಾರಿಗಳನ್ನು ಜರುಗಿಸಿ ತದನಂತರ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.</td></tr>
<tr><td></td><td>2024/12/ XVI</td><td>ರಾಣಿ ಚನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರತಿ ವರ್ಷ ಜರುಗುವ ಘಟಿಕೋತ್ಸವಕ್ಕೆ ಸಂಬಂಧಿಸಿದ ಎಲ್ಲ ಕೆಲಸ-ಕಾರ್ಯಗಳನ್ನು ಪರೀಕ್ಷಾ ವಿಭಾಗದಿಂದ ಕುಲಸಚಿವರು(ಮೌಲ್ಯಮಾಪನ) ಇವರಿಂದ ಜರುಗಿಸಲಾಗುತ್ತದೆ. ಆದರೆ ದಿನಾಂಕ: 03.12.2024 ರಂದು ಜರುಗಿದ 12 ನೇ ಘಟಿಕೋತ್ಸವದ ಖರೀದಿಗೆ ಸಂಬಂಧಿಸಿದ ಕಡತಗಳನ್ನು ಕುಲಸಚಿವರು(ಆಡಳಿತ) ಇವರು ನಿರ್ವಹಿಸಿರುತ್ತಾರೆ. ಅಲ್ಲದೇ, ಘಟಿಕೋತ್ಸವದ ವಿವಿಧ ಪದವಿ ಪ್ರಮಾಣ ಪತ್ರಗಳ ಅಂಕಿ-ಅಂಶಗಳ ವಿವರವನ್ನು ವಿದ್ಯಾವಿಷಯಕ್ ಮತ್ತು ಸಿಂಡಿಕೇಟ್ ಸಭೆಗೆ ಪ್ರಸ್ತುತಪಡಿಸುವ ಕಾರ್ಯವನ್ನು ತಮ್ಮ ಬದಲಾಗಿ ಕುಲಸಚಿವರು(ಆಡಳಿತ) ಇವರು ಮಂಡಿಸಿರುತ್ತಾರೆ. ಇದಕ್ಕೆ ಪ್ರತ್ಯುತ್ತರವಾಗಿ, ಕುಲಸಚಿವರು(ಆಡಳಿತ) ಇವರು ವಿದ್ಯಾವಿಷಯಕ್ ಮತ್ತು ಸಿಂಡಿಕೇಟ್ ಸಭೆಯ ಸದಸ್ಯ ಕಾರ್ಯದರ್ಶಿಯಾಗಿ ವಿಷಯಗಳ ಕುರಿತಾಗಿ ವಿವರಣೆಯನ್ನು</td></tr>
</table>

| | | |
|---|---|---|
| | | ನೀಡುವುದು ನನ್ನ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ವಿಷಯಕ್ಕೆ ಸಂಬಂಧಿಸಿದ ಎಲ್ಲ ವಿವರಣೆಯನ್ನು ಸದಸ್ಯರುಗಳಿಗೆ ಮಾಹಿತಿ ನೀಡಿರುತ್ತೇನೆ ಎಂದರು ಹಾಗೂ ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾಲಯದ ಎಲ್ಲ ಟೆಂಡರ್‌ಗೆ ಸಂಬಂಧಿಸಿದ ಕಛೇರಿ ಆದೇಶಗಳನ್ನು ಕುಲಸಚಿವರು(ಆಡಳಿತ) ಇವರ ಮೂಲಕ ಆದೇಶ ಹೊರಡಿಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು.<br>ನಂತರ ಮಾನ್ಯ ಕುಲಪತಿಗಳು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರಲ್ಲಿ ಕುಲಸಚಿವರು(ಆಡಳಿತ) ಮತ್ತು ಕುಲಸಚಿವರು(ಮೌಲ್ಯಮಾಪನ) ಇವರುಗಳು ನಿರ್ವಹಿಸಬೇಕಾದ ಕೆಲಸ-ಕಾರ್ಯಗಳ ಬಗ್ಗೆ ನಿರ್ದಿಷ್ಟಪಡಿಸಿದ್ದು, ಅದರಂತೆ ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ಕುಲಸಚಿವರು(ಮೌಲ್ಯಮಾಪನ) ಇವರು ಜರುಗಿಸುವುದು ಹಾಗೂ ವಿಶ್ವವಿದ್ಯಾಲಯದ ಎಲ್ಲ ಟೆಂಡರ್ ಕಾಮಗಾರಿಗಳು ಕುಲಸಚಿವರು(ಆಡಳಿತ) ಇವರ ಮೂಲಕ ನಿರ್ವಹಿಸಲು ತಿಳಿಸಿದರು. ಈ ವಿಷಯಕ್ಕೆ ಸಭೆಯು ಅನುಮೋದನೆ ನೀಡಿತು. |
| | 2024/12/ XVII | ವಿಶ್ವವಿದ್ಯಾಲಯದಿಂದ ಖರೀದಿಸಲಾದ ಒಟ್ಟು 249 ಲ್ಯಾಪ್‌ಟಾಪ್‌ಗಳನ್ನು ಈಗಾಗಲೇ ಅಂತಿಮ ವರ್ಷದ ಸ್ನಾತಕೋತ್ತರ ವಿಭಾಗಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. ಆದರೆ, ವಾಣಿಜ್ಯಶಾಸ್ತ್ರ ವಿಭಾಗದ ಕೆಲವು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ದೊರೆತಿರುವುದಿಲ್ಲ. ಕಾರಣ, ಅಂತಹ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲು ಪ್ರೊ. ಎಸ್. ಬಿ. ಆಕಾಶ ಇವರು ಮನವಿ ಮಾಡಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು. |
| | 2024/12/ XVIII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಪೀಠಗಳ ಶೈಕ್ಷಣಿಕ ವೇಳಾಪಟ್ಟಿ, ವಿವರ, 4 ವರ್ಷಗಳಲ್ಲಿ ಕೈಗೊಂಡ ಪ್ರಗತಿ ವರದಿಯನ್ನು ಸಿದ್ಧಪಡಿಸಲು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಶ್ರೀ ಮಹಾಂತೇಶ ಕಂಬಾರ ಇವರು ಸಲಹೆ ನೀಡಿದ ಹಿನ್ನೆಲೆಯಲ್ಲಿ ಸಭೆಯು ಒಪ್ಪಿಗೆ ನೀಡಿತು. |
| | 2024/12/ IXI | ವಿಶ್ವವಿದ್ಯಾಲಯದಲ್ಲಿ ಭದ್ರತಾ ಸಿಬ್ಬಂದಿಗಳ ಸಂಖ್ಯೆ ವಿವರ, ಅಧಿನಿಯಮದ ಪ್ರಕಾರ ಅವರಿಗೆ ನೀಡಲಾಗುತ್ತಿರುವ ಸಂಬಂಳ ಕುರಿತಾಗಿ ಶ್ರೀ ಮಹಾಂತೇಶ ಕಂಬಾರ ಇವರು ಮಾಹಿತಿ ಕೋರಿದರು. ಶ್ರೀ ಶ್ರೀನಿವಾಸ್ ಹಡಾಡಿ ಭದ್ರತಾ ಸಿಬ್ಬಂದಿಗಳಿಗೆ ಅಧಿನಿಯಮದ ಮತ್ತು ಶಿಫ್ಟ್ ಪ್ರಕಾರ ಅವರು ನಿರ್ವಹಿಸುವ ಕಾರ್ಯಕ್ಕೆ ಅನುಗುಣವಾಗಿ ವೇತನ ಸಂದಾಯ ಮಾಡಲಾಗುತ್ತಿದೆ ಎಂದರು.<br>ಹಣಕಾಸು ಅಧಿಕಾರಿಗಳಾದ ಎಂ. ಸಪ್ಪ ಇವರು ಭದ್ರತಾ ಗುತ್ತಿಗೆದಾರರು ಭದ್ರತಾ ಸಿಬ್ಬಂದಿಗಳ ವೇತನದಲ್ಲಿ PF, ESI ಹಣ ಕಡಿತವಾಗುತ್ತಿರುವ ಕುರಿತು ಸಂಬಂಧಿಸಿದ ಪಾಸ್‌ಬುಕ್ ಪರಿಶೀಲಿಸಲಾಗುತ್ತದೆ ಎಂದರು. ಮುಂದುವರೆದು ದಾಖಲಾತಿಗಳನ್ನು ನೀಡಲು ಕೋರಿದರು. |
| | 2024/12/ XX | ಕೃಷ್ಣಾ ವಸತಿನಿಲಯದ ಕೊಠಡಿಗಳ ಬಾಗಿಲುಗಳನ್ನು ದುರಸ್ತಿಗೊಳಿಸುವುದು ಮತ್ತು ಸುತ್ತಮುತ್ತಲಿನ ಕಸದ ಸಮಸ್ಯೆ ಪರಿಹರಿಸಿ ಕಳೆ ನಾಶ ಔಷಧಗಳನ್ನು ಸಿಂಪಡಿಸಿ ಹಾವುಗಳ ಕಾಟ ತಪ್ಪಿಸುವಂತೆ ಮತ್ತು ವಸತಿನಿಲಯದ ಭದ್ರತಾ ಸಿಬ್ಬಂದಿಯು ರಾತ್ರಿ ವೇಳೆ ಸುಮಾರು 5 ರಿಂದ 6 ಸಲ ಗಸ್ತು ನಿರ್ವಹಿಸುವಂತೆ ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಮನವಿ ಮಾಡಿದ ಹಿನ್ನೆಲೆಯಲ್ಲಿ ಈ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಸಚಿವರು ಸಭೆಗೆ ತಿಳಿಸಿದರು. |
| | 2024/12/ XXI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಕೋರಿ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಹಲವಾರು ಸಿಬ್ಬಂದಿಗಳು ಮನವಿ ಸಲ್ಲಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.<br>ಸುಮಾರು ವರ್ಷಗಳಿಂದ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ತಮ್ಮ ಕುಟುಂಬ ನಿರ್ವಹಣೆಯ ಅನಿವಾರ್ಯ ಕಾರಣಗಳಿಂದಾಗಿ(Genuine Reason) ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ವಿನಂತಿಸಿರಬಹುದು ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಈ ಕುರಿತಾಗಿ ಕೂಲಂಕುಷವಾಗಿ ಪರಿಶೀಲಿಸಲು ಸಿಂಡಿಕೇಟ್ ಉಪಸಮಿತಿಯನ್ನು ರಚಿಸಲು ಸಭೆಯು ತೀರ್ಮಾನಿಸಿತು.<br>ವರ್ಗಾವಣೆ ಕೋರುವ ಸಿಬ್ಬಂದಿಯ ಪಟ್ಟಿಯನ್ನು ಸದರಿ ಉಪಸಮಿತಿಯ ಸಭೆಗೆ ಮಂಡಿಸುವುದು ಹಾಗೂ ಉಪಸಮಿತಿಯು ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿದ ಮನವಿಗಳನ್ನು ಪರಿಶೀಲಿಸಿ ಶಿಫಾರಸ್ಸುಗಳನ್ನು ಸಲ್ಲಿಸಲು ಸೂಚಿಸಿತು. |
| | 2024/12/ XXII | ಇತ್ತೀಚೆಗೆ ಜರುಗಿದ ಬೆಳಗಾವಿ ಚಳಿಗಾಲ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಶಾಸಕರಾದ ಸನ್ಮಾನ್ಯ ಶ್ರೀ ಸಾಬಣ್ಣ ತಳವಾರ ಇವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ PM-Usha ಯೋಜನೆಯಡಿಯಲ್ಲಿ ಮಂಜೂರಾದ ರೂ. 100 ಕೋಟಿಗಳ ಅನುದಾನ ನಿರುಪಯುಕ್ತ ಎಂದು ನೀಡಿರುವ ಹೇಳಿಕೆ ಕುರಿತು ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಪ್ರಸ್ತಾಪಿಸಿ ಈ ರೀತಿಯ ಹೇಳಿಕೆಗಳು ಸಾರ್ವಜನಿಕ ವಲಯದಲ್ಲಿ ವಿಶ್ವವಿದ್ಯಾಲಯದ ಘನತೆಗೆ ಧಕ್ಕೆ ಉಂಟು ಮಾಡುತ್ತವೆ. |

| | | |
|---|---|---|
| | | ಕಾರಣ, ವಿಶ್ವವಿದ್ಯಾಲಯದ ಸಮಗ್ರ ಅಭಿವೃದ್ಧಿ ಕಾರ್ಯಕಾರಿ ಸಮಿತಿ ರಚಿಸುವುದು ಸೂಕ್ತ ಎಂದು ಸಲಹೆ ನೀಡಿದರು. |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B + ಗ್ರೇಡ್ – 2021)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade - 2021)

E-mail:rcuregistrar@gmail.com
registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

Website:www.rcub.ac.in

Phone No.: 0831-2565203/34


Azadi Ka Amrit Mahotsav

ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/೨೦೨೪-೨೫/ 6218

ದಿನಾಂಕ: 17 JAN 2025

**ಮಾನ್ಯ ಸಿಂಡಿಕೇಟ್ ಸದಸ್ಯರೆ,**

ವಿಷಯ : ದಿನಾಂಕ : 31-12-2024 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸಿಂಡಿಕೇಟ್ ಸಭ ನಡೆದ ದಿನಾಂಕ : 31-12-2024

ದಿನಾಂಕ : 31-12-2024 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಿಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 21-01-2025ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ತಿಳಿಸಲು ವಿನಂತಿಸಲಾಗಿದೆ.

ತಮ್ಮ ಲಿಖಿತ ಅಭಿಪ್ರಾಯ ಬಾರದಿದ್ದಲ್ಲಿ ಇಲ್ಲಿನ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಲಾಗುವುದು.

ವಂದನೆಗಳು.

ತಮ್ಮ ವಿಶ್ವಾಸಿ,

**ಸಂತೋಷ ಕಾಮಗೌಡ ಕೆ.ಎ.ಎಸ್.(ಹಿರಿಯ ಶ್ರೇಣಿ)**
**ಕುಲಸಚಿವರು**
**ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ**